
**13** ಕೌಶಿಕ ಮುನಿಗಳು ರಾಜನಿಂದ ಯಜ್ಞದ ಪ್ರತಿಫಲವನ್ನು ಸ್ವೀಕರಿಸಿ ಪುನಃ ತಪಸ್ಸಿನಲ್ಲಿ ನಿರತರಾದರು. ಅವರ ಆತ್ಮವು ಜ್ಯೋತಿರೂಪದಿಂದ ಬೆಳಗಿ ಪರಬ್ರಹ್ಮನಲ್ಲಿ ಐಕ್ಯವಾಯಿತು.



**14** ಮುನಿಗಳಿಂದ ಜಪದ ಫಲವನ್ನು ಸ್ವೀಕರಿಸಿ ರಾಜನು ಬ್ರಹ್ಮನ ಬಾಯೊಳಗೆ ಹೊಕ್ಕುಬಂದು ಪರಮಯೋಗಿಯಾದನು. ಜಪದ ಫಲವನ್ನು ಸ್ವೀಕರಿಸಿದವರೂ ಪರಮಯೋಗಿಗಳಾಗಬಲ್ಲರೆಂದು ಇದರಿಂದ ನಿಶ್ಚಯವಾಯಿತು.



**15** ಯಾರು ಇಂದ್ರಿಯಗಳನ್ನು ವಶದಲ್ಲಿಟ್ಟುಕೊಂಡು, ಅಹಂಕಾರ ಬಿಟ್ಟು, ಅಧ್ಯಾತ್ಮಸಾಧಕರಾಗಿ ಮಂತ್ರಜಪ ಮಾಡುವವರೋ ಅವರು ಪರಮಪದವನ್ನು ಪಡೆಯಬಲ್ಲರು. ಇದೇ ಗಾಯತ್ರಿ ಮಂತ್ರದ ಮಹಿಮೆ!



**16** ಮಂತ್ರದಿಂದ ಶರೀರ ಶುದ್ಧಿಯಾಗುತ್ತದೆ.
ಭಗವನ್ನಾಮಸ್ಮರಣೆಯಿಂದ ಮನುಷ್ಯ ಪವಿತ್ರನಾಗುತ್ತಾನೆ. ಸದಾ ಭಗವನ್ನಾಮವನ್ನು ಜಪಿಸಿ.
ಚಂಚಲ ಮನಸ್ಸಿನಿಂದ ಗಂಟೆಗಟ್ಟಲೆ ಮಾಡಿದ ಜಪಕ್ಕಿಂತ, ಏಕಾಗ್ರತೆಯಿಂದ ಭಗವನ್ನಾಮಸ್ಮರಣೆಯನ್ನು ಕೇವಲ ಒಂದೆರಡು ನಿಮಿಷಗಳಷ್ಟು ಮಾಡುವುದೇ ಶ್ರೇಷ್ಠವಾದದ್ದು.

– ಶ್ರೀಮಾತೆ ಶಾರದಾದೇವಿ

